ದಾಸರಾಯರ ವಾಣಿಯಲ್ಲಿ ಮೂಡಿಬಂದ ಯುಕ್ತ್ಯನುಸಂಧಾನಗಳು - ೧

ದ್ರೌಪದಿಗೆ ಅಕ್ಷಯ ವಸ್ತ್ರ

(ಶ್ರೀ ಪುರಂದರ ದಾಸರ ವಾಣಿಯಲ್ಲಿ)

ಪ್ರಕೃತ ಈ ಮೊದಲು ಉಲ್ಲೇಖಿಸಿದ ಅನೇಕ ಪೌರಾಣಿಕ ಸಂದರ್ಭಗಳಲ್ಲಿ "ದ್ರೌಪದಿಯ ಅಕ್ಷಯ ವಸ್ತ್ರವಿತ್ತ ಸಂದರ್ಭವನ್ನು" ನಮ್ಮ ಅಧ್ಯಯನಕ್ಕೆ ಆಯ್ದುಕೊಳ್ಳುವಾ. ಈ ಸಂದರ್ಭವನ್ನು ಕೆಲವರು "ದ್ರೌಪದಿಯ ವಸ್ತ್ರಾಪಹರಣ" ವೆಂದು ಹೇಳುತ್ತಾರೆ. ಹಾಗೆ ಹೇಳುವುದು ಅನುಚಿತ ಉಪಕ್ರಮ. ಹಾಗೆ ಇದ್ದರೂ ಉಪಸಂಹಾರ ಅಕ್ಷಯ ವಸ್ತ್ರದಾನದಲ್ಲಿ ಪರಿಯವಸಾನವಾಗಿಲ್ಲವೇ. ಅಲ್ಲದೇ ಅಕ್ಷಯ ವಸ್ತ್ರವೆಂದರೆ ಶ್ರೀ ಕೃಷ್ಣ ದ್ರೌಪದಿಯರು ಸ್ಮರಣೆಗೆ ಬರುತ್ತಾರೆ. ಅದೇ ಶುಭ ಚಿಂತನ.

ಮಹಾಭರತದಲ್ಲಿ ಬರತಕ್ಕ ಈ ಸಂದರ್ಭ ಸಾಮಾನ್ಯವಾಗಿ ಎಲ್ಲರಿಗೂ ಪರಿಚಯವಿದ್ದೇ ಇದೆ. ಒಮ್ಮೆ ಜ್ಞಾಪಿಸಿಕೊಂಡು ಪದಗಳಕಡೆಗೆ ದೃಷ್ಟಿ ಹರಿಸುವಾ. ಕೌರವರು-ಪಾಂಡವರು ಜೂಜನಾಡಿದರು. ದುರ್ಯೋಧನಾದಿಗಳ ಕಪಟದಿಂದ ಯುಧಿಷ್ಠಿರನು ರಾಜ್ಯ, ಐಶ್ವರ್ಯ, ತಮ್ಮಂದಿರು, ಹೆಂಡತಿ, ಕೊನೆಗೆ ತನ್ನನ್ನೂ ತಾನೇ ಪಣವಿಟ್ಟು ಎಲ್ಲವನ್ನೂ ಸೋತನು, ಪಾಂಡವರೆಲ್ಲರೂ ದುರ್ಯೋಧನನ ದಾಸರಾದರು. ಅದೇ ಸಮಯವೆಂದು ಸೇಡುತೀರಿಸಿಕೊಳ್ಳಲು ದುರ್ಯೋಧನನು, ದ್ರೌಪದಿಯನ್ನು ಸಭೆಗೆ ಎಳೆತರಲು ಆಜ್ಞಾಪಿಸಿದನು. ಅವನಿಗೂ ಅಷ್ಟೇ ಸಾಕು. ದ್ರೌಪದಿಯು ಸಭೆಗೆ ಬರತಕ್ಕ ಸ್ಥಿತಿಯಲ್ಲಿರಲಿಲ್ಲ. ಅದೆಷ್ಟು ಪ್ರತಿಭಟಿಸಿದರೂ ಕೇಳದೇ ದುಷ್ಟ ಎಳೆದು ತಂದೇಬಿಟ್ಟನು. ಆಜ್ಞಪ್ತನಾಗೆ, ಅವಮಾನ ಪಡಿಸಲು ಸೀರೆಯನ್ನು ಸೆಳೆಯಲಾರಂಭಿಸಿದನು. ಮೊದಲು ಅಬಲೆ ನಡುಗಿದಳು. ಅಂಧನೃಪನಿಗೆ ಹೇಳಿಕೊಂಡಳು. ಭೀಷ್ಮ, ದ್ರೋಣ, ಕೃಪಾದಿಗಳು ಸುಮ್ಮನಿದ್ದರು. ಗಾಂಧಾರಿ ಸುಮ್ಮನಿದ್ದಳು, ವಿದುರ ಪ್ರತಿಭಟಿಸಿದರೂ ಸಫಲವಾಗಲಿಲ್ಲ. ಪತಿಗಳೈವರು ಪ್ರಚಂಡ ಬಲವುಳ್ಳವರಾದರೂ ಆ ಸಮಯದಲ್ಲಿ ಅಸಹಾಯಕರಾಗಿದ್ದರು. ಕೊನೆಗೆ ಶ್ರೀಕೃಷ್ಣನನ್ನು ವಿಶೇಷವಾಗಿ ಪ್ರಾರ್ಥಿಸಿದಳು. ಸ್ವಾಮಿಯು ಅಕ್ಷಯ ವಸ್ತ್ರ ಪ್ರದಾನ ಮಾಡಿದನು. ದುಷ್ಟನು ಸೀರೆ ಸೆಳೆದು ದಣಿದನು. ಸಾಹಸ ವಿಫಲವಾಯಿತು. ಸೀರೆಯ ರಾಶಿಗಳೇ ಬಿದ್ದವು. ದುಷ್ಟ ದುರ್ಯೋಧನ ದುಶ್ಯಾಸನರು ಖತಿಗೊಂಡರು. ಕುರುಕುಲಕ್ಕೆ ಶಾಪಕೊಡುವುದಾಗಿ ಆರ್ಭಟಿಸಿದ ಮೇಲೆ ಧೃತರಾಷ್ಟ್ರನು ಸಾಂತ್ವನ ಮಾಡಲು ಮುಂದೆ ಬಂದನು. ಕೃಷ್ಣ ರಕ್ಷಿಸಿದನೆಂದು ದ್ರೌಪದಿಗೆ, ಪಾಂಡವರಿಗೆ, ಭೀಷ್ಮಾದಿಗಳಿಗೆ ಅರಿವಾಯಿತು. ಭಕ್ತವತ್ಸಲ, ದ್ರೌಪದಿಯ ಮಾನರಕ್ಷಕನೆಂದು ಭಗವಂತನಿಗೆ ಅಪಾರ ಕೀರ್ತಿ ಬಂತು.

ಪುರಾಣ ಶ್ರವಣ ಕಾಲದಲ್ಲಿ ನಮಗೆ ವಿದಿತವಾಗುವುದು ಇಷ್ಟೇ. ಪ್ರಕೃತ ದಾಸರಾಯರ ಮುಖದಿಂದ ನಿಸ್ರುತವಾದ ಪದಗಳಲ್ಲಿ ಈ ಸಂದರ್ಭವನ್ನು ಅದು ಹೇಗೆ ಉದಹರಿಸಿರುತ್ತಾರೆ, ನೋಡುತ್ತಾರೆ, ವಿಶ್ಲೇಷಿಸುತ್ತಾರೆ. ಸಕಾರಣವಾಗಿ ತರ್ಕಬದ್ಧವಾಗಿ ಹೇಗೆ ನಿರ್ಧರಿಸುತ್ತಾರೆ. ಇತ್ಯಾದಿಗಳನ್ನು ಅವರ ಪದಗಳಿಂದಲೇ ನೋಡುವಾ. ಪದಗಳ ಉಪಕ್ರಮ (ಪಲ್ಲವಿ), ವಿಷಯ ಪುಷ್ಟೀಕರಿಸುವ ನುಡಿ ಮತ್ತು ಉಪಸಂಹಾರ, (ಅಂಕಿತದಿಂದ ಕೊನೆಗೊಳ್ಳುವ ನುಡಿ) ಇಷ್ಟು ಮಾತ್ರ ಗಮನಿಸುವಾ.

೧. ಪುರಂದರ ದಾಸರ ವಾಣಿಯಲ್ಲಿ:-

ಅಂದಿಂದ ನಾನಿನ್ನ ನೆರೆನಂಬಿದೆನೋ ಕೃಷ್ಣ |

ತಂದೆಗೋವಿಂದ ಮುಕುಂದ ನಂದನ ಕಂದ |

ದ್ರುಪದನ ಸುತೆಯ ದು | ಶ್ಯಾಸನನು ಸಭೆಯೊಳು |

ಕಪಟದಿ ಸೀರೆಯ | ಸೆಳೆಯುತಿರಲು |

ಸುಪರ್ಣವಾಹನ ಕೃಷ್ಣ | ಸಲಹೆಂದರಬಲೆಯ |

ಅಪಮಾನದಿಂ ಕಾಯ್ದ | ಶ್ರೀ ಹರಿ ಎಂಬುದನು ಕೇಳಿ |

ಶ್ರೀಮನ್ಮಹಾಭಾರತವನ್ನು ಶ್ರವಣ ಮಾಡುವಾಗ ಈ ದಾರುಣ ಸಂದರ್ಭದಲ್ಲಿ ಶ್ರೀ ಕೃಷ್ಣ ಪರಮಾತ್ಮನು ದ್ರೌಪದಿಗೆ ಅಕ್ಷಯ ವಸ್ತ್ರ ಪ್ರದಾನ ಮಾಡಿ ಮಾನ ಕಾಯ್ದು ದುಷ್ಟ ಶಿಕ್ಷೆ ಶಿಷ್ಟ ಪರಿಪಾಲನ ಮಾಡಿದ್ದನ್ನು ಕೇಳಿದಂದಿನಿಂದಲೂ ಸರ್ವಾತ್ಮನಾ ಅವನನ್ನೇ ನಂಬಿದ್ದೇನೆ ಎನ್ನುತ್ತಾರೆ ದಾಸರು. ಅಚಲ ಭಕ್ತಿಗೆ / ವಿಶ್ವಾಸಾರ್ಹತೆಗೆ ಕಾರಣವನ್ನು ತೋರಿಸಿ ನಂಬಿಕೆಯ ನಿರ್ಧಾರಕ್ಕೆ ಬಂದರು,

೧. ಆರಿದ್ದರೇನಯ್ಯ ನೀನಿಲ್ಲದೆ |

ಕಾರುಣ್ಯ ನಿಧಿ ಹರಿಯೆ ಕೈಯ ಬಿಡಬೇಡ ||

ದುರುಳ ಕೌರವನಂದು | ದ್ರುಪದಜೆಯ ಸೀರೆಯನು ||

ಕರಗಳಿಂ ಸೆಳೆಯುತಿರೆ | ಪತಿಗಳೆಲ್ಲ ||

ಗರ ಹೊಡೆದಂತಿರ್ದ | ರಲ್ಲದೆ ನರಹರಿಯೇ |

ಕರುಣೆ ನೀನಲ್ಲ ದಿನ್ನಾ | ರು ಕಾಯ್ದವರಯ್ಯ ||

.... .... .... .... .... .... ....

ತ್ರಿಜಗದೊಡೆಯ ಸಿರಿ | ಪುರಂದರ ವಿಠ್ಠಲ |

ಆ ಕುರುಪತಿಯ ಸಭೆಯಲ್ಲಿ ಹಿರಿಯರಾದ ಅತ್ತೆ ಮಾವ ಇದ್ದರು. ಭೀಷ್ಮ ದ್ರೋಣಾದಿಗಳಿದ್ದರು. ವಿದುರನಿದ್ದ, ಬಲಿಷ್ಠ ಐವರು ಪತಿಗಳಿದ್ದರು. ಇಷ್ಟಿದ್ದರೂ ಯಾರಿಗೂ ಮಾನ ಸಂರಕ್ಷಣೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ದಾಸರೆನ್ನುತ್ತಾರೆ ಎಷ್ಟು ಜನರಿದ್ದರೇನು ಲೆಕ್ಕಕ್ಕೆ, ಸಹಾಯಕ್ಕೆ ಒದಗಿದವನು ನೀನೊಬ್ಬನೇ. ಕರುಣಾಸಾಗರನಾದ್ದರಿಂದ ನಿನ್ನನ್ನೇ ನಂಬಿದ್ದೇನೆ ನೀ ಎನ್ನ ಕೈಯ ಬಿಡಬೇಡವೆಂದು ಪ್ರಾರ್ಥಿಸುತ್ತಾರೆ ದಾಸರು.

೨. ಕಾವದೇವ ನೀನಲ್ಲದೆ | ಜನಕಿನ್ನಾವದೇವರುಳ್ಳರೈ |

ಅತಿಚಪಲದಿ ದುಶ್ಯಾಸನ ಸಭೆಯಲ್ಲಿ |

ಪತಿಗಳೈವರು ಎದುರಿನೊಳಿರಲು ||

ಖತಿಯಿಂದ ಸೆಳೆಯಲು ಸೀರೆಯದ್ರೌ|

ಪದಿಯಭಿಮಾನವ ಪೊರೆದೆ ಕರುಣದಿ ||

.... .... ....  .... .... ....

ನೆರೆದು ಪೊರೆದೆ ಕರುಣಾಳುಗಳರಸನೆ |

ಗುರುಪುರಂದರ ವಿಠ್ಠಲ ಕರುಣದಲಿ ||

ಮೇಲಿನ ಪದ್ಯವನ್ನೇ ಗುರುಪುರಂದರ ವಿಠಲರು ಇನ್ನೊಂದು ರೀತಿ ವಿವರಿಸುತ್ತಾರೆ. ಇಲ್ಲಿಯೂ ಕಾರುಣ್ಯ-ಅನನ್ಯ ಗತಿತ್ವದ್ಯೋತಕ.

೪. ಆರೇನು ಮಾಡುವರು | ಆರಿಂದಲೇನಹುದು ||

ಪೂರ್ವಜನ್ಮದ ಕರ್ಮ | ವಿಧಿಬೆನ್ನಬಿಡದು ||

ಪಾಪಿದುಶ್ಯಾಸನನು ದ್ರೌಪದಿಯ ಸೀರೆಯ ಸೆಳೆದು

ಕೋಪದಿಂ ಮಾನ ಭಂಗವ ಮಾಡುತಿರಲು |

ಶ್ರೀಪತಿಯೆ ಕಾಯೆಂದು ಮೊರೆಯಿಡುವ ಸಮಯದಲ್ಲಿ |

ಭೂಪರೈವರು ಇದ್ದು ಏನುಮಾಡಿದರು ||

.... .... .... .... .... .... .... ....

ಬೊಮ್ಮ ಮೂರುತಿ ನಮ್ಮ ಪುರಂದರ ವಿಠಲನೇ |

ನಿಮ್ಮ ಆಜ್ಞೆಯ ಮೀರಿ ಬದುಕಿ ಬಾಳುವರುಂಟೇ |

ದ್ರೌಪದಿಗೆ ಕೌರವನ ಸಭೆಯಲ್ಲಿ ಆದ, ಎಲ್ಲರ ಕೈ ಮೀರಿದ ಆ ಸಂದರ್ಭಕ್ಕೆ ಕಾರಣ ಪ್ರಾರಬ್ಧ ಕರ್ಮವೆನ್ನುತ್ತಾರೆ ದಾಸರು. ಪ್ರಾರಬ್ಧ ಕರ್ಮ ಭೋಗಕ್ಕೆ ನಿಯಮೇನ ಎಲ್ಲರೂ ಒಳಪಟ್ಟಿದ್ದಾರೆ ಎಂದು ದಾಸರ ನಿರ್ಧಾರ.

೫. ನಾನೇನು ಮಾಡಿದೆನೋ | ವೆಂಕಟರಾಯ ನೀ ಎನ್ನ ಕಾಯಬೇಕೋ ||

ಮಾನಾಪಮಾನವು ನಿನ್ನದು ಎನಗೇನು |

ದೀನರಕ್ಷಕ ತಿರುಪತಿಯ ವೆಂಕಟರಾಯ ||

ಕರಿರಾಜ ಕರೆಸಿದನೇ | ದ್ರೌಪದಿದೇವಿ ಬರೆದೋಲೆ ಕಳಿಸಿದಳೇ | ವರಋಷಿ ಪತ್ನಿಕಲ್ಲಾಗಿ ಸ್ತ್ರೀಯಾಗಿದ್ದು | ಧರೆಯಲ್ಲ ಅರಿಯದೇನೋ | ವೆಂಕಟರಾಯ || ೧ ||

ಸರ್ಪಶಯನ ಶ್ರೀ ಪುರಂದರ ವಿಠಲ |

ಅಪ್ರಮೇಯನೇ ಸಲಹೋ ವೆಂಕಟಗಿರಿಕಾಯ || ೨ ||

ಹೇ ಸ್ವಾಮಿನ್, ನೀನು ಇವರನ್ನೆಲ್ಲ ಪೊರದದ್ದು ಧರೆಯಲ್ಲಿ ಪ್ರಸಿದ್ಧಿ ಇದೆ. ನಾನೂ ನಿನ್ನನ್ನು ರಕ್ಷಣೆಗಾಗಿ ಪ್ರಾರ್ಥಿಸುತ್ತಿದ್ದೇನೆ. ನನ್ನಲ್ಲೇಕೆ ಈ ವೈಷಮ್ಯ. ನನ್ನ ಸಮಯಕ್ಕೆ ಒದಗತಕ್ಕ ಸೂಚನೆಯೇ ಇಲ್ಲವಲ್ಲ. ನನ್ನ ಸರ್ವಸ್ವವೂ ನಿನ್ನ ಹೊಣೆ ಎನ್ನುತ್ತಾರೆ ದಾಸರು.

೬. ನಾನಿನ್ನ ಮನಕೆಬಾರೆನೇ | ಜಯಪಾಂಡುರಂಗ | ||ಪ||

ನಾನಿನ್ನ ಮನಕೆ ಬಾರೆನೇ | ಬಂದರೆ ಈ ಭವದ |

ಬಲೆಯೊಳು ಸಿಲುಕುವೆನೇ | ಜಯಪಾಂಡುರಂಗ ||ಅ.ಪ.||

ಐದು ಮಂದಿಯ ಕೂಡೆ | ಸರಸವು ದ್ರೌಪದಿಗೆ |

ಐದೆ ಲಜ್ಜೆಯಕಾಯ್ದೆ | ಜಯಪಾಂಡುರಂಗ ||೫||

ಎಲ್ಲರನುದ್ಧರಿಸಿದ್ಯೋ | ಪುರಂದರವಿಠಲ |

ನೀಯಾಕೆ ಎನ್ನನು ಮರೆತ್ಯೋ | ಜಯಪಾಂಡುರಂಗ ||೮||

ಎಲ್ಲರನ್ನೂ ಕಾಯ್ದನೆಂಬ ಪ್ರತೀತಿಯುಳ್ಳ ಶ್ರೀಹರಿ, ತಮ್ಮ ವಿಷಯದಲ್ಲಿ ಉದಾಸೀನ ತಳೆದಿರುವನೆಂಬ ಭಾವನೆಯಿಂದ ದಾಸರ ಈ ಪ್ರಾರ್ಥನೆ.

೭. ನೀನೇ ದಯಾ ಸಂಪನ್ನನೋ | ಕಾವೇರೀರಂಗ |

ನೀನೇ ಬ್ರಹ್ಮಾದಿವಂದ್ಯನೋ |

ಬಂಧುಗಳೆಲ್ಲರ ಮುಂದಾದ್ರುಪದನ |

ನಂದನೆ ಎಳೆತಂದು ಸೀರೆಯ ಸೆಳೆವಾಗ ||

ಬಂದು ಕೃಷ್ಣಾ ಸಲಹೆಂದರೆ ಅಕ್ಷಯ |

ವೆಂದು ಕಾಯ್ದಗೋವಿಂದನು ನೀನೆ ||೧||

ಭಕ್ತರ ಸಲಹುವ ಪುರಂದರ ವಿಠಲ

ಹಸ್ತಿಗೊಲಿದ ಪರವಸ್ತುವು ನೀನೇ ||೩||

ಇಷ್ಟು ಜನರ ಆಪತ್ತಿಗೊದಗಿದ ಶ್ರೀಹರಿಯೇ ಇತರ ಯಾರಿಗಿಂತಲೂ ದಯಾ ಸಂಪನ್ನನೆಂದು ನಿಶ್ಚಿತವಾಗಿ ಹೇಳುತ್ತಾರೆ.

೮. ನಿನ್ಯಾಕೋ ನಿನ್ನ ಹಂಗ್ಯಾಕೋ |

ನಿನ್ನನಾಮದ ಬಲವೊಂದಿದ್ದರೆ ಸಾಕೋ ||ಪ||

ಸಭೆಯಲಿ ಬಾಲೆಯ ಸೀರೆಯ ಸೆಳೆವಾಗ |

ಬಾಲಕೃಷ್ಣಾನೆಂಬೊನಾಮವೇಕಾಯ್ತೋ ||೫||

ನಿನ್ನ ನಾಮಕೆ ಪರಿಗಾಣೆನೋ ಜಗದೊಳು |

ಘನ್ನ ಮಹಿಮ ಶ್ರೀ ಪುರಂದರ ವಿಠಲ ||೭||

ಈ ಪದದಲ್ಲಿ, ಗಜರಾಜ, ಪ್ರಹ್ಲಾದ, ದ್ರೌಪದಿ, ಅಜಾಮಿಳ, ಧ್ರುವ, ಇತ್ಯಾದಿ ಭಕ್ತರು ಭಗವಂತನ ನಾಮ ಮಾತ್ರ ನೆನೆದರು. ಕೆಲವರಿಗೆ ಹರಿ ಸಮೀಪಕ್ಕೆ ಬಂದು ಪೊರೆದ, ಕೆಲವರಿಗೆ ದೂರದಿಂದಲೇ ಪರಿಹಾರ. ದಾಸರು ಅನ್ನುತ್ತಾರೆ. ನಿನ್ನ ನಾಮದ ಮಹಿಮೆಯಿಂದಲೇ ನಮ್ಮ ಎಲ್ಲ ಕೆಲಸಗಳಾಗುತ್ತವೆ. ಆದ್ದರಿಂದ ನಿನ್ನ ಹಂಗು ನಮಗೆ ಬೇಡವೆಂದು ಸಲಿಗೆಯಿಂದ ಮಾತನಾಡುತ್ತಾರೆ.

೯. ಕರುಣಾಕರ ನೀ ನೆಂಬುವುದೇತಕೋ |

ಭರವಸೆಯಿಲ್ಲೆನಗೆ ||

ಪರಿಪರಿಯಲಿ ಈ ನರ ಜನ್ಮವನಿತ್ತು | ತಿರುಗಿ ತಿರುಗಿ ಮನ |

ಕರಗಿಸುವದಕಂಡು ||

ಕರಿ ಧ್ರುವ ಬಲಿ ಪಾಂಚಾಲಿ ಅಹಲ್ಯೆಯ ಪೊರೆದವ ನೀನಂತೆ |

ಅಂತುವಿಚಾರಿಸೆ ನೋಡಿದಡೆಲ್ಲವು ಪರಿ ಪರಿ ಕಂತೆಗಳಂತೆ ಕೃಷ್ಣಾ ||೧||

ವರ ಬಿರುದಂಗಳು ಉಳಿಯಬೇಕಾದರೆ ತ್ವರಿತದಿ ಕಾಯೋ -

ಪುರಂದರ ವಿಠಲ || ||೩||

ದಾಸರು ಸಂದೇಹ ವ್ಯಕ್ತ ಪಡಿಸುತ್ತಾರೆ. ಅವರಿಗೆ ಸಂದೇಹವಿಲ್ಲ. ಆದರೆ ಪರಮಾತ್ಮನ ಈ ಕಾರುಣ್ಯ ಗುಣವು ಒಂದಿಲ್ಲೊಂದು ಸಲ ಭಕ್ತನ ಅನುಭವಕ್ಕೆ ಬಾರದ ವಿನಹ ಅವುಗಳೆಲ್ಲವೂ 'ಅಂತೆ' ಕಂತೆ ಪುರಾಣಗಳು. ಆದ್ದರಿಂದ ದಾಸರು, ನಿನ್ನ ಬಿರುದು ಉಳಿಯಬೇಕಾದರೆ ನಮಗೂ ನಿನ್ನ ಕಾರುಣ್ಯದ ಸೊಂಕು ದೊರಕಲಿ ನಿನ್ನನ್ನು ಕರುಣಾಸಾಗರ ಎಂದು ಕರೆಯುತ್ತೇವೆ ಎನ್ನುತ್ತಾರೆ.

೧೦. ಒಂದೇ ಕೂಗಳತೆ | ವೈಕುಂಠ ||ಪ||

ಸಂದೇಹ ವಿಲ್ಲವೋ | ಸಾಧು ಸಜ್ಜನರಿಗೆ ||ಅ.ಪ.||

ದ್ರುಪದ ರಾಜನ ಪುತ್ರಿ ಆಪತ್ತು ಕಳೆಯೆನೆ |

ಕೃಪೆಯಿಂದ ಅಕ್ಷಯ ವಸ್ತ್ರ ವಿತ್ತೇ |

ಕೃಪಣ ವತ್ಸಲ ಸ್ವಾಮಿ ಪುರಂದರ ವಿಠಲನ ||

ಗುಪಿತದಿ ನೆನೆವರ ವದನ ವೈಕುಂಠ ||೩||

ಭಾಗವತಾದಿ ಪುರಾಣಗಳನ್ನು ಶ್ರವಣ ಮಾಡುವಾಗ ಮತ್ತು ಅನೇಕ ಕಡೆಗೆ ಬ್ರಹ್ಮಾಂಡದ ವರ್ಣನೆ ಬರುತ್ತದೆ. ಬ್ರಹ್ಮಾಂಡದಲ್ಲಿ ವೈಕುಂಠಸ್ಥಾನ, ಬ್ರಹ್ಮಾಂಡ ಖರ್ಪರದ ಸಮೀಪದಲ್ಲಿದೆ. ಸ್ವಲ್ಪ ಹೆಚ್ಚು ಕಡಿಮೆ (ಅಂದಾಜ) ನಾವಿದ್ದ ಸ್ಥಳದಿಂದ

(ಭೂಲೋಕದಿಂದ) ವೈಕುಂಠ ಇಪ್ಪತ್ತೈದು ಕೋಟಿ ಯೋಜನ ದೂರದಲ್ಲಿದೆ. ಇದು ಭೌತಿಕ ಮಾನ ದಂಡದ ಅಳತೆಯ ಪ್ರಕಾರ ಅಷ್ಟು ದೂರವಿರುವುದೇನೋ ನಿಜ.

ಆದರೆ ದಾಸರೆನ್ನುತ್ತಾರೆ, ಶಬ್ದ ಅಥವಾ ಧ್ವನಿ ಸಹಾಯದಿಂದ ಅಳತೆ ಮಾಡುವ ಗಜರಾಜ, ದ್ರೌಪದಿ, ಅಜಾಮಿಳ, ಅಂಬರೀಷ ಇಂತಹ ಅನೇಕರು ಕೂಗಿ ಸ್ವಾಮಿಯನ್ನು ಕರೆದಿದ್ದಾರೆ. ಆತನು ವೈಕುಂಠದಿಂದ ಬಂದ ವರ್ಣನೆ ಇದೆ. ಅಂದ ಮೇಲೆ ವೈಕುಂಠ ದೂರ ಒಂದು ಕೂಗಳತೆಯಲ್ಲವೇ. ಕೊನೆಗೆ ಅನ್ನುತ್ತಾರೆ. "ಯಾವುದು ವೈಕುಂಠವೋ ಅಲ್ಲಿ ನಾರಾಯಣ ಇದ್ದಾನೆ. ಯಾವ ಸಜ್ಜನರ ವದನದಲ್ಲಿ ನಾರಾಯಣ ಇರುವನೋ ಅದೂ ವೈಕುಂಠವೇ ಆಗಲಿ" ಎಂಬ ವಿಪರ್ಯಯ ಪರ್ಯವಸಾನವೆಂಬ ತರ್ಕಭಂಗಿಯಿಂದ, ಯುಕ್ತ್ಯನುಸಂಧಾನ ಮಾಡಿ, ಪದವು ಮಂಗಳವನ್ನು ಮುಟ್ಟುತ್ತದೆ.

----------------------------------------------------------------------------------------------------------